# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 16-03-2021 ಪ್ರಶ್ನೆ ಸಂಖ್ಯೆ : 183 (1415)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 16-03-2021

ಉತ್ತರಿಸುವ ಸಚಿವರು: ಸಹಕಾರ ಸಚಿವರು

ವಿಷಯ : ಕುಂಬಾರ ಸಂಘದ ಹಾಸ್ಟೆಲ್‌ನ ಅವ್ಯವಹಾರದ ಬಗ್ಗೆ

(ಅ) ಕಲಾಸಿಪಾಳ್ಯಂನಲ್ಲಿರುವ ಕುಂಬಾರ ಸಂಘದ ಹಾಸ್ಟೆಲ್ ಯಾವಾಗ ಪ್ರಾರಂಭವಾಯಿತು ;

(ಆ) ಈ ನಿವೇಶನವನ್ನು ಯಾರ ಹೆಸರಿಗೆ ಹಾಗೂ ಯಾವ ಉದ್ದೇಶಕ್ಕಾಗಿ ನೀಡಲಾಗಿದೆ; ಉದ್ದೇಶಗಳು ಈಡೇರಿದೆಯೇ ;

(ಇ) ಸರ್ಕಾರದಿಂದ ಸಂಘಕ್ಕೆ ಈವರೆವಿಗೂ ನೀಡಿರುವ ಅನುದಾನ ಎಷ್ಟು ; ಸದರಿ ಅನುದಾನವನ್ನು ಸಮರ್ಪಕವಾಗಿ ವಿನಿಯೋಗಿಸಲಾಗಿದೆಯೇ ; ಇಲ್ಲದಿದ್ದಲ್ಲಿ ಕಾರಣವೇನು ; ಈ ನಿಟ್ಟಿನಲ್ಲಿ ತೆಗೆದುಕೊಂಡ ಕ್ರಮವೇನು ; (ವರ್ಷವಾರು ಮಾಹಿತಿ ನೀಡುವುದು)

(ಈ) ಸರ್ಕಾರದಿಂದ ಈ ಸಂಘಕ್ಕೆ ಯಾವ ಯಾವ ಸೌಕರ್ಯ/ಸವಲತ್ತುಗಳನ್ನು ನೀಡಲಾಗಿದೆ ;

(ಉ) ಸಂಘದ ಚುನಾವಣೆಯನ್ನು ನಿಗದಿತ ಅವಧಿಯಂತೆ ನಡೆಸದಿರುವ ಬಗ್ಗೆ ನ್ಯಾಯಾಲಯದಲ್ಲಿ ಹೂಡಿರುವ ದಾವೆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?